# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1020
ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 20.08.2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ತಾಲ್ಲೂಕಿನ ಸಾರಿಗೆ ಘಟಕ (ಡಿಪೋ) ದಲ್ಲಿ ಒಟ್ಟು ಎಷ್ಟು ಬಸ್ಸುಗಳಿವೆ; ಅವುಗಳಲ್ಲಿ ಸುಸಜ್ಜಿತವಾದ ಬಸ್ಸುಗಳು ಎಷ್ಟಿವೆ; ಕೆಟ್ಟು ನಿಂತಿರುವ ಹಳೆಯದಾದ ಬಸ್‌ಗಳು ಎಷ್ಟು; | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ರಾಯಚೂರು ವಿಭಾಗದ ಸಿಂಧನೂರು ಘಟಕದಲ್ಲಿ ಒಟ್ಟು 98 ಬಸ್‌ಗಳಿಂದ 93 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ದಿನಾಂಕ:19.08.2025 ರಂದು ಘಟಕದಲ್ಲಿ 03 ಬಸ್‌ಗಳನ್ನು ಸಾಮಾನ್ಯ ದುರಸ್ಥಿಗಾಗಿ ನಿಲುಗಡೆಗೊಳಿಸಲಾಗಿದ್ದು, ಸದರಿ ಬಸ್‌ಗಳಿಗೆ ಅವಶ್ಯಕ ಬಿಡಿಭಾಗಗಳನ್ನು ಪೂರೈಕೆ ಮಾಡಿ ಶೀಘ್ರವೇ ಕಾರ್ಯಾಚರಣೆಗೆ ತರಲಾಗುವುದು. |
| ಆ) | ಈ ತಾಲ್ಲೂಕಿನ ದಡೆಸೂಗೂರು, ಜವಳಗೇರ ಮತ್ತು ಗಾಂಧಿನಗರದಲ್ಲಿ ಹೊಸ ಬಸ್ ನಿಲ್ದಾಣಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ದಡೆಸುಗೂರು, ಜವಳಗೇರ ಮತ್ತು ಗಾಂಧಿ ನಗರದಲ್ಲಿ ಹೊಸ ಬಸ್ ನಿಲ್ದಾಣಗಳನ್ನು ಸ್ಥಾಪಿಸುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ. |
| ಇ) | ಸಿಂಧನೂರು ಘಟಕಕ್ಕೆ ಹೆಚ್ಚುವರಿಯಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಹೊಸ ಬಸ್‌ಗಳನ್ನು ಸಂಚರಿಸುವ ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ಸಂಚರಿಸಲು ಕ್ರಮ ಕೈಗೊಳ್ಳಲಾವುದು? | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಸಿಂಧನೂರು ಘಟಕಕ್ಕೆ 2023-24 ರಿಂದ 2024-25ರ ವರೆಗೆ 02 ಕಲ್ಯಾಣ ರಥ ವೋಲ್ವೋ, ಮಲ್ಟಿ ಆಕ್ಸಲ್ ಸ್ಲೀಪರ್ ಸೇರಿದಂತೆ ಒಟ್ಟು 24 ಹೊಸ ಬಸ್‌ಗಳನ್ನು ನೀಡಲಾಗಿರುತ್ತದೆ.<br><br>ಅಲ್ಲದೇ, 2025-26ನೇ ಸಾಲಿನ ಸರ್ಕಾರದ ಆಯವ್ಯಯದಲ್ಲಿ ಘೋಷಿಸಿದ 2000 ಬಸ್ಸುಗಳ ಪೈಕಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್‌ಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ 400 ಬಸ್‌ಗಳ ಖರೀದಿಗೆ ನಿಗದಿಪಡಿಸಲಾಗಿರುವ ಅನುದಾನವನ್ನು ಹೊರತುಪಡಿಸಿ ಉಳಿಕೆ ಮೊತ್ತಕ್ಕೆ KKRDB, DULT ಗಳಿಂದ ಅನುದಾನ ಒದಗಿಸುವಂತೆ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯನ್ನು ಕೋರಲಾಗಿದ್ದು, ನಿರೀಕ್ಷಿಸಲಾಗಿದೆ.<br><br>ಅನುದಾನ ದೊರೆತು ಹೊಸ ಬಸ್ಸುಗಳ ಖರೀದಿಸಿದ ನಂತರ ಘಟಕದ ಅವಶ್ಯಕತೆಗನುಗುಣವಾಗಿ ಪರಿಶೀಲಿಸಿ ಆದ್ಯತೆಯ ಮೇರೆಗೆ ಹೊಸ ಬಸ್ಸುಗಳನ್ನು ಒದಗಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ಟಿಡಿ 188 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು